ಸಾವಿರ ಡಾಲರುಗಳ ಖರ್ಚು, ಹಲ್ಲೆಗೆ ಹಲವು ತಿಂಗಳುಗಳ ಮೊದಲು ಪ್ರೇಮದಲ್ಲಿ ಬಿದ್ದು ನಾಲ್ಕನೆಯ ಬಾರಿಗೆ ಮದುವೆಯಾದ ಪ್ರೇಮಕಥೆ – ಭಾವನೆಗಳ ಅನೇಕ ಪದರಗಳು ಮತ್ತು ಜೀವನದ ಅನೇಕ ರಸಗಳು ಒಮ್ಮೆಗೇ ಕಾಣಿಸುತ್ತವೆ.

ಎಲ್ಲಕ್ಕಿಂತ ಮುಖ್ಯವಾಗಿ ಹಲ್ಲೆಯನ್ನೆಸಗಿದ ಯುವಕನ ಜೊತೆಗಿನ ಒಂದು ದೀರ್ಘ, ಕಾಲ್ಪನಿಕ ಸಂಭಾಷಣೆಯೂ ಇದೆ. ಆ ಸಂಭಾಷಣೆಯ ಮೂಲಕ ಈ ಅತಿವಾಸ್ತವ ಘಟನೆಯನ್ನು ಅರ್ಥೈಸಲು ಪ್ರಯತ್ನಿಸುತ್ತಾರೆ. ಮೊದಲಿಗೆ ನಮಗೆ ತಟ್ಟುವ ಮಾತು ಇದು – ಪೊಲೀಸರ ಕೈಯಲ್ಲಿ ಬಂಧನಕ್ಕೊಳಗಾಗಿರುವ ಯುವಕ ತಾನೇ ಈ ಕೃತ್ಯವನ್ನು ಎಸಗಿದ್ದು ಎಂದು ಒಪ್ಪಿದರೆ (Plead guilty) ಅಲ್ಲಿಗೆ ಅವನ ಜೈಲುವಾಸದ ಅವಧಿಯನ್ನು ನಿರ್ಧರಿಸಬಹುದು. ಆದರೆ ಅವನು ತಾನು ಈ ಅಪರಾಧವನ್ನು ಎಸಗಿಲ್ಲ ಎಂದು ನ್ಯಾಯಪದ್ಧತಿಗೆ ಹೇಳಿದ್ದಾನೆ. ಹೀಗಾಗಿ ಈಗ ವಿಚಾರಣೆ ನಡೆಯುತ್ತದೆ. ಅನೇಕ ಜನರ ಉಪಸ್ಥಿತಿಯಲ್ಲಿ ಬಹಿರಂಗ ಸ್ಥಳದಲ್ಲಿ ಈ ಕೃತ್ಯ ಆಗಿದ್ದರೂ ನ್ಯಾಯವ್ಯವಸ್ಥೆಯ ಪದ್ಧತಿಗಳನ್ನು ಪಾಲಿಸಬೇಕು. ಅವನು ತಪ್ಪಿತಸ್ಥನಲ್ಲ ಎಂದು ಹೇಳಿಕೊಂಡರೆ, ಕೋರ್ಟಿಗೆ ರಶ್ದಿ ಕೂಡಾ ಹೋಗಿ ತಮ್ಮ ಹೇಳಿಕೆಯನ್ನು ಕೊಡಬೇಕು. ತಾನು ತಪ್ಪಿತಸ್ಥನಲ್ಲ ಎಂದು ವಿಚಾರಣೆಯ ಸಮಯದಲ್ಲಿ ಹೇಳಿದವನೇ, ತಾನು ಎಸಗಿದ ಕೃತ್ಯಗಳಿಗೆ ಕಾರಣವೇನೆಂದೂ ಹೇಳಿದ್ದಾನೆ. ಈ ಅಂತರ್ವಿರೋಧವನ್ನು ಕೋರ್ಟು ಗಮನಿಸುತ್ತದೆ.

ರಶ್ದಿ ತನ್ನ ಹಂತಕನ ಜೊತೆಗೆ ನಡೆಸುವ ಕಾಲ್ಪನಿಕ ಸಂಭಾಷಣೆಯಲ್ಲಿ ಒಂದು ವ್ಯಗ್ರ ವ್ಯಂಗ್ಯವೂ ಇದೆ. ಆ ಯುವಕನಿಗೆ ಈ ಕೃತ್ಯಕ್ಕೆ ಪ್ರೇರಣೆ ಎಲ್ಲಿಂದ ಬಂದಿರಬಹುದು ಎನ್ನುವ ಕುತೂಹಲವನ್ನು ತಣಿಸಲು ಮತ್ತು ಧಾರ್ಮಿಕ ಬೋಧನೆಯಲ್ಲಿರಬಹುದಾದ ಟೊಳ್ಳನ್ನು ಗ್ರಹಿಸಲು ಅವರು ಬಳಸುವ ಧರ್ಮಗುರು –ಇಮಾಮ್ ಯೂಟುಬಿ. ಯೂಟ್ಯೂಬ್ ವಿಡಿಯೋಗಳನ್ನು ಪಾಲಿಸಿ ದಾರಿ ತಪ್ಪಿರಬಹುದು ಎನ್ನುವ ಮಾತನ್ನು ರಶ್ದಿ ಸೂಕ್ಷ್ಮವಾಗಿ ಹೇಳುತ್ತಾರೆ. ಆದರೆ, 24 ವರ್ಷದ – ಎದುರಿಗೆ ಇಡೀ ಜೀವನ ತೆರೆದಿರಬಹುದಾದ ಸಮಯದಲ್ಲಿ, ಏನೆಲ್ಲಾ ಕಾಣಲು ಬಾಕಿಯಿರುವ, ಈ ಯುವಕ, 75 ವರ್ಷದ ಬರಹಗಾರನ ಮೇಲೆ ಯಾಕೆ ಹಲ್ಲೆ ಮಾಡಬೇಕು?



ಕಾರ್ಯಕಾರಣ ಸಂಬಂಧವಿಲ್ಲದಿದ್ದರೂ, ಸಲ್ಮಾನ್ ರಶ್ದಿ ಇತರ ಲೇಖಕರಿಗಿಂತ ಭಿನ್ನವಾಗಿರುವುದು 'ಸಟಾನಿಕ್ ವರ್ಸಸ್' ಮತ್ತು ಅದರಿಂದಾಗಿ ಬಂದ ಫತ್ವಾದಿಂದಾಗಿ. 'ಸಟಾನಿಕ್ ವರ್ಸಸ್' ಮೊದಲ ಬಾರಿಗೆ ಪ್ರಕಟಗೊಂಡಾಗ ಆ ಯುವಕ ಹುಟ್ಟಿಯೂ ಇರಲಿಲ್ಲ. ಫತ್ವಾ ಜಾರಿ ಮಾಡಿದ ಖೊಮೇನಿಯೂ ಇಲ್ಲ. ಈ ಯುವಕನಿಗೆ ಖೊಮೇನಿ ಗೊತ್ತೋ ಇಲ್ಲವೋ ಗೊತ್ತಿಲ್ಲ. ಫತ್ವಾಕ್ಕೂ ಈ ಹಲ್ಲೆಗೂ ಸಂಬಂಧವಿದೆಯೋ ತಿಳಿಯದು. ಆದರೆ, ಸಾಮೂಹಿಕ ನೆನಪಿನಲ್ಲಿ ರಶ್ದಿ ಕಾಫಿರನಾಗಿ, ಧರ್ಮವನ್ನು ಅವಹೇಳನ ಮಾಡಿದವನಾಗಿ ನೆಲೆ ನಿಂತಿದ್ದಾರೆ. ಅದಕ್ಕೆ ಯಾವ ಸಮರ್ಥನೆಯ ಮಾತುಗಳನ್ನಾಡಿದರೂ ಪ್ರಯೋಜನವಿಲ್ಲ. ಸಾಮೂಹಿಕ ನೆನಪಿನಲ್ಲಿ ಹೀಗೆ ಒಂದು ವ್ಯಕ್ತಿತ್ವ ರೂಪುಗೊಳ್ಳುವುದನ್ನು ನೋಡಿದರೆ ನಿಜಕ್ಕೂ ಭಯವಾಗಬೇಕು.

ಸಾವಿನಂಚಿನಲ್ಲಿದ್ದ, ಉಸಿರಾಡಲು ಸಾಧ್ಯವಾಗದೇ ವೆಂಟಿಲೇಟರಿನ ಮೇಲಿದ್ದ ಆ ದೇಹ ಪೂರ್ತಿ ಮರಮ್ಮತ್ತಾಗಿ, ಎಲ್ಲ ಭಾಷಾ ಪ್ರತಿಭೆ, ನೆನಪು, ಕಾವ್ಯ, ಪ್ರೀತಿ, ಸಾಹಿತ್ಯದೊಂದಿಗೆ ವಾಪಸ್ಸಾಗಿದೆ. ಸಾಮೂಹಿಕ ನೆನಪು ಅಳಿಯುತ್ತಿಲ್ಲ. ರಶ್ದಿಯವರ ವೈಯಕ್ತಿಕ ನೆನಪೂ ಧಕ್ಕೆಗೊಳಗಾಗಿಲ್ಲ. ಹೀಗಾಗಿಯೇ, ಆ ಸಾಮೂಹಿಕ ನೆನಪಿಗೂ ರಶ್ದಿಯ ವೈಯಕ್ತಿಕ ನೆನಪಿಗೂ ತಾಳೆಹಾಕಿ ನೋಡುವುದು ನಮಗೆ ಸಾಧ್ಯವಾಗಿದೆ. ಇದನ್ನೇ ಮ್ಯಾಜಿಕ್ ಎನ್ನಬೇಕು. ಇದು ವಾಸ್ತವವೂ ಸಹ. ಇದೇ ಮ್ಯಾಜಿಕ್ ರಿಯಲಿಸಂ. ●